# ಸೈಕಲ್ ಪ್ಯೂರ್ ಅಗರಬತ್ತಿ ಸಂಸ್ಥೆಯಿಂದ ಬೆಂಗಳೂರು ದೇವಾಲಯ ಉತ್ಸವ

ಬೆಂಗಳೂರು: ಸೈಕಲ್ ಪ್ಯೂರ್ ಅಗರಬತ್ತಿ ಮತ್ತು ಲಾಭರಹಿತ ಸಂಸ್ಥೆ ಹೆರಿಟೇಜ್‌ನಿಂದ ಬನಶಂಕರಿ 2ನೇ ಹಂತದ ದೇವಗಿರಿ ವರಪ್ರದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ 'ಬೆಂಗಳೂರು ದೇವಾಲಯ ಉತ್ಸವ 2023 - ಗುಡಿಯ ಸಂಭ್ರಮ' ಜ.26ರಿಂದ ಆರಂಭವಾಗಿದ್ದು, ಫೆ.5ರವರೆಗೆ ನಡೆಯಲಿದೆ.ಹತ್ತು ದಿನಗಳ ಈ ಗುಡಿ ಉತ್ಸವವನ್ನು ಈ ಬಾರಿ 'ಸರ್ವಶಕ್ತಿಮಯಿ ದೇವಿ' ಎಂಬ ಘೋಷವಾಕ್ಯದಡಿ ಆಚರಿಸಲಾಗುತ್ತಿದೆ. ದೇವಿಯ ಎಲ್ಲ ಶಕ್ತಿಗಳ ಪ್ರತಿರೂಪ ಎಂಬಂತೆ ಸಂಭ್ರಮಿಸುವ ಭಾರತೀಯ ಪುರಾತನ ಆಚರಣೆ ಇದಾಗಿದೆ. ಸೈಕಲ್‌ಪ್ಯೂರ್ ಅಗರಬತ್ತಿ ಸಂಸ್ಥೆಯವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗ, ದೇವಾಲಯ ಉತ್ಸವಕ್ಕೆ ಹೆರಿಟೇಜ್ ಮತ್ತು ವರಪದ ಶ್ರೀ ದೇವಗಿರಿ ದೇವಸ್ತಾನಂ ಟ್ರಸ್ಟ್‌ಗಳು ಸಹಯೋಗ ನೀಡಿವೆ. ಡಾ। ಆರ್.ರಂಗನ್‌ಜಿ, ಅಂಬಿ ಸುಬ್ರಹ್ಮಣಿಯಂ, ಸುನಾದ್ ಅನೂರ್ ಮತ್ತು ಅನೂರ್ ವಿನೋದ್ ಶ್ಯಾಮ್ ಅವರಂತಹ ವೇದಾಂತ ಪಂಡಿತರು ಮತ್ತು ಸಂಗೀತ ಕಲಾವಿದರು ಕಾರ್ಯಕ್ರಮದಲ್ಲಿ ಪ್ರದರ್ಶನ ನೀಡಲಿದ್ದಾರೆ ಎಂದು ತಿಳಿಸಿದರು.